# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 72 (99) |
| ಮಾನ್ಯ ಸದಸ್ಯರ ಹೆಸರು | ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 13.02.2023 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಪ್ರಸ್ತುತ ಇರುವ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಸದರಿ ಆಸ್ಪತ್ರೆಗಳಲ್ಲಿ ಯಾವ ಯಾವ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ; ಸದರಿ ಎಲ್ಲಾ ಆಸ್ಪತ್ರೆಗಳ ಹಾಗೂ ಚಿಕಿತ್ಸೆಗಳ ಆಸ್ಪತ್ರೆವಾರು, ನಗರವಾರು ಹಾಗೂ ಆಸ್ಪತ್ರೆಗಳಲ್ಲಿ ನೀಡುತ್ತಿರುವ ಚಿಕಿತ್ಸೆವಾರು ಸಂಪೂರ್ಣ ಮಾಹಿತಿಯನ್ನು ದಾಖಲಾತಿಯೊಂದಿಗೆ ನೀಡುವುದು; | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 16 ಜಿಲ್ಲಾ ಆಸ್ಪತ್ರೆಗಳು ಹಾಗೂ ಬೆಂಗಳೂರು ನಗರದಲ್ಲಿನ 03 ಪ್ರಧಾನ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ (ವಿವರಗಳನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ).<br><br>• ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು 2156, ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು 365, ಸಮುದಾಯ ಆರೋಗ್ಯ ಕೇಂದ್ರಗಳು 207. ತಾಲ್ಲೂಕು ಆಸ್ಪತ್ರೆಗಳು 146 ಕಾರ್ಯನಿರ್ವಹಿಸುತ್ತಿವೆ. ವಿವರವನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.<br><br>• ಜಿಲ್ಲಾ ಆಸ್ಪತ್ರೆಗಳಲ್ಲಿ ನೀಡಲಾಗುವ ಸೇವೆಗಳ ಮಾಹಿತಿಗಳು ಈ ಕೆಳಗಿನಂತಿದೆ.<br><br>1. ವೈದ್ಯಶಾಸ್ತ್ರ, -ವೈದ್ಯಕೀಯ ತೀವ್ರ ನಿಗಾಘಟಕ.<br>2. ಶಸ್ತ್ರಚಿಕಿತ್ಸೆ -ಎಂಡೋಸ್ಕೊಪಿ<br>3. ಗರ್ಭಿಣಿ ಮತ್ತು ಸ್ತ್ರೀ ರೋಗ ಚಿಕಿತ್ಸೆ.<br>4. ನವಜಾತ ಶಿಶು ಮತ್ತು ಮಕ್ಕಳ ಚಿಕಿತ್ಸೆ.<br>5. ಅಸ್ಥಿರೋಗ ಚಿಕಿತ್ಸೆ.<br>6. ಅರವಳಿಕೆ.<br>7. ಕಿವಿ, ಮೂಗು ಗಂಟಲು ರೋಗ ಚಿಕಿತ್ಸೆ.<br>8. ಕಣ್ಣಿನ ಚಿಕಿತ್ಸೆ.<br>9. ಚರ್ಮರೋಗ ಚಿಕಿತ್ಸೆ.<br>10. ಮಾನಸಿಕ ರೋಗ ಚಿಕಿತ್ಸೆ.<br>11. ದಂತ ಚಿಕಿತ್ಸೆ. |

<table>
<tr><td></td><td></td><td>
12. ಮೂತ್ರಪಿಂಡ ರೋಗ ಚಿಕಿತ್ಸೆ - ಡಯಾಲಿಸಿಸ್.<br>
13. ಲ್ಯಾಬೋರೇಟರಿ ಸೌಲಭ್ಯಗಳು.<br>
14. ರಕ್ತ ಶೇಖರಣಾ ಘಟಕ.<br>
15. ರೇಡಿಯಾಲಜಿ.<br>
16. ಫಿಸಿಯೋಥೆರಪಿ.<br><br>
ತಾಲೂಕು ಆಸ್ಪತ್ರೆಯು ಮೊದಲನೇ ಹಂತದ ರೆಫರಲ್ ಘಟಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿ ಹೊರರೋಗಿಗಳ ತಪಾಸಣೆ ಹಾಗೂ ಚಿಕಿತ್ಸೆ, ಸಾಮಾನ್ಯ ರೋಗಗಳಿಗೆ ಒಳರೋಗಿ ಚಿಕಿತ್ಸೆ, ಹೆರಿಗೆ ಸೌಲಭ್ಯ, ಶಸ್ತ್ರ ಚಿಕಿತ್ಸೆಗಳು ಹಾಗೂ ಪ್ರಯೋಗಶಾಲಾ ಪರೀಕ್ಷೆಗಳು, ಆರೋಗ್ಯ ಶಿಕ್ಷಣ/ಸಲಹೆ, ರೆಫರಲ್ ಸೇವೆಗಳು, ಇದಲ್ಲದೆ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನವಾಗುತ್ತದೆ.<br><br>
ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹೊರರೋಗಿಗಳ ತಪಾಸಣೆ ಹಾಗೂ ಚಿಕಿತ್ಸೆ ಸಾಮಾನ್ಯ ರೋಗಗಳಿಗೆ ಒಳರೋಗಿ ಚಿಕಿತ್ಸೆ, ಸಾಮಾನ್ಯ ಹೆರಿಗೆ ಹಾಗೂ ಪ್ರಯೋಗಶಾಲಾ ಪರೀಕ್ಷೆಗಳು, ಆರೋಗ್ಯ ಶಿಕ್ಷಣ/ಸಲಹೆ, ರೆಫರಲ್ ಸೇವೆಗಳು ಮುಂತಾದ ಸೌಲಭ್ಯಗಳು ಲಭ್ಯವಿರುತ್ತದೆ. ಇದಲ್ಲದೆ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನವಾಗುತ್ತದೆ.<br><br>
ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೇಲಿನ ಎಲ್ಲಾ ಸೌಲಭ್ಯಗಳ ಜೊತೆಗೆ ತಜ್ಞ ವೈದ್ಯರ ಸೇವೆಗಳು ಸಹ ಲಭ್ಯವಿರುತ್ತದೆ. ಗರ್ಭಿಣಿಯರ ತಪಾಸಣೆ, ಹೆರಿಗೆ ಹಾಗೂ ಹೆರಿಗೆ ನಂತರದ ಚಿಕಿತ್ಸಾ ಸೇವೆ, ನವಜಾತ ಶಿಶುಗಳ ಆರೈಕೆ, ಸಿಝೇರಿಯನ್ ಶಸ್ತ್ರ ಚಿಕಿತ್ಸೆ ದಂತ ಚಿಕಿತ್ಸೆ, ಸಾಮಾನ್ಯ ಶಸ್ತ್ರಚಿಕಿತ್ಸೆ, ಅರವಳಿಕೆ, ಮಕ್ಕಳ ಆರೋಗ್ಯ ತಪಾಸಣೆ, ಲಸಿಕಾ ಕಾರ್ಯಕ್ರಮ ಮತ್ತು ಕುಟುಂಬ ಕಲ್ಯಾಣ ಯೋಜನೆಯ ಕಾರ್ಯಕ್ರಮಗಳ ಅನುಷ್ಠಾನವಾಗುತ್ತದೆ.<br><br>
• ರಾಜ್ಯದಲ್ಲಿ ಪ್ರಸ್ತುತ ಇರುವ ಖಾಸಗಿ ಆಸ್ಪತ್ರೆಗಳ ಸಂಖ್ಯೆ: 3298.<br>
ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಡಿಯಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಗಳು ನೋಂದಣಿಗೊಳ್ಳಲು 18 ಪ್ರವರ್ಗಗಳಿದ್ದು, ಆಯಾ ಆಸ್ಪತ್ರೆಗಳು ಆಯ್ಕೆ ಮಾಡಿಕೊಂಡಿರುವ ಪ್ರವರ್ಗಗಳಿಗೆ ತಕ್ಕಂತೆ ಚಿಕಿತ್ಸೆಗಳನ್ನು ನೀಡುತ್ತಿವೆ.
</td></tr>
</table>

| | | |
|---|---|---|
| | | ರಾಜ್ಯದಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಗಳು ಸರಿ ಸುಮಾರು 2061 ವಿಧದ ಚಿಕಿತ್ಸೆಗಳನ್ನು ನೀಡುತ್ತಿರುತ್ತಾರೆ. |
| ಆ | ಆಸ್ಪತ್ರೆಗಳಿಗೆ ಬರುತ್ತಿರುವ ಸಾರ್ವಜನಿಕರಿಗೆ/ ರೋಗಿಗಳಿಗೆ ನೀಡುತ್ತಿರುವ ಚಿಕಿತ್ಸೆಗಳಿಗೆ ಆಸ್ಪತ್ರೆಗಳಲ್ಲಿ ಹೆಚ್ಚಿನ ಹಣವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ; ಬಂದಿದ್ದಲ್ಲಿ, ಸರ್ಕಾರದಿಂದ ತೆಗೆದುಕೊಂಡಿರುವ ಕ್ರಮಗಳ ಸಂಪೂರ್ಣ ಮಾಹಿತಿಯನ್ನು ದಾಖಲಾತಿಗಳೊಂದಿಗೆ ಒದಗಿಸುವುದು; | • ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ 2017 ಸೆಕ್ಷನ್ (15) ಉಪಬಂಧ 1, 2 & 3 ರ ಅಧಿನಿಯಮದಂತೆ ಸೂಕ್ತ ಕ್ರಮ ಕೈಗೊಳ್ಳಲು ಜಿಲ್ಲಾ ಮಟ್ಟದಲ್ಲಿರುವ ನೋಂದಣಿ ಮತ್ತು ಕುಂದು ಕೊರತೆ ನಿವಾರಣಾ ಪ್ರಾಧಿಕಾರಕ್ಕೆ ಅವಕಾಶ ಕಲ್ಪಿಸಲಾಗಿದೆ. (ವಿವರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.)<br><br>• ಖಾಸಗಿ ಆಸ್ಪತ್ರೆಗಳು ಹೆಚ್ಚಿನ ಹಣವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು ಅಂತಹ ದೂರುಗಳ ಮೇಲೆ ವಿಚಾರಣೆ ಮಾಡಿ ಹೆಚ್ಚಿನ ಹಣವನ್ನು ಪಾವತಿಸಿರುವುದು ಕಂಡು ಬಂದರೆ ಅದನ್ನು ಹಿಂದಿರುಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ | ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ನೀಡುತ್ತಿರುವ/ಒದಗಿಸುತ್ತಿರುವ ಚಿಕಿತ್ಸೆಗಳಿಗೆ ಸರ್ಕಾರದಿಂದ ದರಗಳನ್ನು ನಿಗದಿಪಡಿಸಲಾಗಿದೆಯೆ:<br>ನಿಗಧಿಪಡಿಸಿದ್ದಲ್ಲಿ, ಆಸ್ಪತ್ರೆವಾರು, ಚಿಕಿತ್ಸಾವಾರು ನಿಗಧಿಪಡಿಸಿರುವ ದರಗಳ ಸಂಪೂರ್ಣ ಮಾಹಿತಿಯನ್ನು ದಾಖಲಾತಿಯೊಂದಿಗೆ ಒದಗಿಸುವುದು? | ಸರ್ಕಾರಿ ಆಸ್ಪತ್ರೆಗೆ ಬರುವ ಸಾರ್ವಜನಿಕರಿಗೆ/ ರೋಗಿಗಳಿಗೆ ಬಿ.ಪಿ.ಎಲ್ ಕಾರ್ಡ್‌ದಾರರಿಗೆ ಉಚಿತ ಚಿಕಿತ್ಸೆಯನ್ನು ಮತ್ತು ಪರೀಕ್ಷೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಎ.ಪಿ.ಎಲ್ ಕಾರ್ಡ್ ದಾರರಿಗೆ ಸರ್ಕಾರಿದಿಂದ ನಿಗಧಿಪಡಿಸಲಾದ ಮೊತ್ತವನ್ನು ಪಡೆದು ಪರೀಕ್ಷೆಗಳನ್ನು/ ಚಿಕಿತ್ಸೆಯನ್ನು ನೀಡಲಾಗುತ್ತದೆ. ಎ.ಪಿ.ಎಲ್ ಕಾರ್ಡ್‌ದಾರರಿಗೆ ನಿಗಧಿಪಡಿಸಿರುವ ಚಿಕಿತ್ಸಾ/ ಪರೀಕ್ಷಾ ವೆಚ್ಚದ ನಿಗಧಿತ ಸರ್ಕಾರಿ ಆದೇಶದ ಪ್ರತಿಯನ್ನು **ಅನುಬಂಧ—4** ರಲ್ಲಿ ಒದಗಿಸಿದೆ.<br><br>ಸರ್ಕಾರವು ಖಾಸಗಿ ಆಸ್ಪತ್ರೆಗಳಲ್ಲಿ ನೀಡುತ್ತಿರುವ/ ಒದಗಿಸುತ್ತಿರುವ ಚಿಕಿತ್ಸೆಗಳಿಗೆ ಯಾವುದೇ ದರಗಳನ್ನು ನಿಗದಿಪಡಿಸಿರುವುದಿಲ್ಲ. |

**ಆಕುಕ 07 ಎಸ್‌ಬಿವಿ 2023**

(ಡಾ. ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

| ಪ್ರಶ್ನೆ ಸಂಖ್ಯೆ:-99 ಕ್ಕೆ ಅನುಬಂಧ-1 | | | | | |
|---|---|---|---|---|---|
| ರಾಜ್ಯದಲ್ಲಿರುವ ಆರೋಗ್ಯ ಸಂಸ್ಥೆಗಳ ವಿವರ | | | | | |
| ಕ್ರಸಂ | ಜಿಲ್ಲೆ | ತಾಲ್ಲೂಕು ಆಸ್ಪತ್ರೆ | ಸಮುದಾಯ ಆರೋಗ್ಯ ಕೇಂದ್ರ | ಪ್ರಾಥಮಿಕ ಆರೋಗ್ಯ ಕೇಂದ್ರ | ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ |
| 1 | ಬೆಂಗಳೂರು ನಗರ (ಬಿಬಿಎಂಪಿ ಹೊರತುಪಡಿಸಿ) | 3 | 5 | 36 | 160 |
| 2 | ಬೆಂಗಳೂರು ಗ್ರಾಂ | 4 | 2 | 48 | 2 |
| 3 | ರಾಮನಗರ | 3 | 5 | 60 | 4 |
| 4 | ಚಿತ್ರದುರ್ಗ | 5 | 11 | 81 | 5 |
| 5 | ದಾವಣಗೆರೆ | 4 | 4 | 80 | 11 |
| 6 | ಕೋಲಾರ | 4 | 2 | 63 | 9 |
| 7 | ಚಿಕ್ಕಬಳ್ಳಾಪುರ | 5 | 2 | 57 | 4 |
| 8 | ಶಿವಮೊಗ್ಗ | 6 | 7 | 93 | 14 |
| 9 | ತುಮಕೂರು | 9 | 4 | 144 | 6 |
| 10 | ಬಾಗಲಕೋಟೆ | 5 | 8 | 48 | 7 |
| 11 | ಬೆಳಗಾವಿ | 9 | 16 | 139 | 12 |
| 12 | ವಿಜಯಪುರ | 4 | 9 | 63 | 6 |
| 13 | ಧಾರವಾಡ | 3 | 0 | 33 | 19 |
| 14 | ಗದಗ | 4 | 2 | 39 | 3 |
| 15 | ಹಾವೇರಿ | 6 | 5 | 68 | 4 |
| 16 | ಉ.ಕನ್ನಡ | 10 | 3 | 82 | 3 |
| 17 | ಬಳ್ಳಾರಿ | 2 | 6 | 29 | 9 |
| 18 | ವಿಜಯನಗರ | 5 | 7 | 49 | 5 |
| 19 | ಬೀದರ್ | 4 | 8 | 53 | 6 |
| 20 | ಕಲಬುರಗಿ | 6 | 16 | 84 | 15 |
| 21 | ಯಾದಗಿರಿ | 2 | 6 | 41 | 3 |
| 22 | ಕೊಪ್ಪಳ | 3 | 9 | 46 | 3 |
| 23 | ರಾಯಚೂರು | 4 | 6 | 50 | 6 |
| 24 | ಚಾಮರಾಜನಗರ | 3 | 3 | 60 | 2 |
| 25 | ಚಿಕ್ಕಮಗಳೂರು | 6 | 5 | 89 | 2 |
| 26 | ದಕ್ಷಿಣ ಕನ್ನಡ | 4 | 8 | 65 | 12 |
| 27 | ಹಾಸನ | 7 | 15 | 134 | 4 |
| 28 | ಕೊಡಗು | 2 | 7 | 29 | 1 |
| 29 | ಮಂಡ್ಯ | 6 | 10 | 113 | 3 |
| 30 | ಮೈಸೂರು | 6 | 10 | 118 | 23 |
| 31 | ಉಡುಪಿ | 2 | 6 | 62 | 2 |
| | **ರಾಜ್ಯದ ಒಟ್ಟು** | **146** | **207** | **2156** | **365** |

ಸಹ ನಿರ್ದೇಶಕರು
ಆರೋಗ್ಯ ಮತ್ತು ಯೋಜನೆ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ
ಆನಂದರಾವ್ ವೃತ್ತ, ಮಾಗಡಿ ರಸ್ತೆ, ಬೆಂಗಳೂರು-560 023.

ಅನುಬಂಧ - ೩

15. [1][ಜುಲ್ಮಾನೆ ಅಥವಾ][1] ನೋಂದಣಿಯ ಅಮಾನತು ಅಥವಾ ರದ್ದತಿ.- [1][(1) 7ನೇ ಪ್ರಕರಣದ (8)ನೇ ಉಪಪ್ರಕರಣದ ಅಡಿಯಲ್ಲಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ನೀಡಿದ ಯಾವುವೇ ನಿರ್ದೇಶನಗಳನ್ನು ಅನುಪಾಲಿಸಲು ವಿಫಲವಾಗುವ ಯಾವುದೇ ಖಾಸಗಿ ವೈದ್ಯಕೀಯ ಸಂಸ್ಥೆಯ ಸಂದರ್ಭದಲ್ಲಿ, ಪ್ರಾಧಿಕಾರವು, ಆ ಸಂಸ್ಥೆಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವೊಂದನ್ನು ನೀಡಿದ ನಂತರ, ಐವತ್ತು ಸಾವಿರ ರೂಪಾಯಿಗಳಿಗಿಂತ ಮೀರದಂತ ದಂಡವನ್ನು ವಿಧಿಸಬಹುದು ಮತ್ತು ಅನುಪಾಲನೆಗೆ ಸಮಯವನ್ನು ನೀಡಬಹುದು ಅಥವಾ ಸಂಸ್ಥೆಯ ನೋಂದಣಿಯನ್ನು ರದ್ದುಗೊಳಿಸಲು ಮುಂದಾಗಬಹುದು.

(2) ಹೆಚ್ಚಿನ ಶುಲ್ಕ ವಿಧಿಸುವುದಕ್ಕೆ ಸಂಬಂಧಿಸಿದಂತೆ ರೋಗಿಯು ಮಾಡಿದ ದೂರನ್ನು, 8ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ವಿಚಾರಣೆ ನಡೆಸಿದ ತರುವಾಯ, ಖಾಸಗಿ ವೈದ್ಯಕೀಯ ಸಂಸ್ಥೆಯು, 10ನೇ ಪ್ರಕರಣದ (2), (4) ಅಥವಾ (5)ನೇ ಉಪಪ್ರಕರಣದಲ್ಲಿನ ಉಪಬಂಧಗಳನ್ನು ಉಲ್ಲಂಘಿಸಿರುವುದು ಕಂಡುಬಂದಲ್ಲಿ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, ಆ ಸಂಸ್ಥೆಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವೊಂದನ್ನು ನೀಡಿದ ತರುವಾಯ, ವಿಧಿಸಿದ ಹೆಚ್ಚಿನ ಶುಲ್ಕದ ಮೊತ್ತಕ್ಕಿಂತ ಒಂದೂವರೆಪಟ್ಟು ಮೊತ್ತಕ್ಕೆ ಸಮನಾದ ದಂಡವನ್ನು ವಿಧಿಸತಕ್ಕದ್ದು. ದಂಡದ ಮೊತ್ತದಿಂದ ಹೆಚ್ಚಾಗಿ ವಿಧಿಸಿದ ಮೊತ್ತಕ್ಕೆ ಸಮನಾದ ಮೊತ್ತವನ್ನು ರೋಗಿಗೆ ಸಂದಾಯ ಮಾಡತಕ್ಕದ್ದು ಮತ್ತು ಉಳಿದುದನ್ನು ಸಾರ್ವಜನಿಕ ಆರೋಗ್ಯ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕಾಗಿ ಜಿಲ್ಲೆಯ ಆರೋಗ್ಯ ರಕ್ಷಾ ಸಮಿತಿಯಲ್ಲಿ ಜಮೆ ಮಾಡತಕ್ಕದ್ದು:

ಪರಂತು, ಒಂದು ನಿರ್ದಿಷ್ಟ ಖಾಸಗಿ ವೈದ್ಯಕೀಯ ಸಂಸ್ಥೆಯು ಹಾಗೆ ಹೆಚ್ಚಿನ ಶುಲ್ಕವನ್ನು ವಿಧಿಸಿದ ಸಂದರ್ಭದಲ್ಲಿ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, 8ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ, ಖಾಸಗಿ ವೈದ್ಯಕೀಯ ಸಂಸ್ಥೆಯು 10ನೇ ಪ್ರಕರಣದ ಉಪಬಂಧಗಳನ್ನು ಒಂದು ಕ್ಯಾಲೆಂಡರ್ ವರ್ಷದಲ್ಲಿ ಮೂರನೇ ಬಾರಿಗೆ ಉಲ್ಲಂಘಿಸಿರುವುದು ಕಂಡುಬಂದಲ್ಲಿ, ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳುವುದಕ್ಕಾಗಿ ಮತ್ತು ತರುವಾಯದ ಕಾನೂನು ಕ್ರಮ ಕೈಗೊಳ್ಳಲು ಸಂಬಂಧಪಟ್ಟ ನ್ಯಾಯಾಲಯಕ್ಕೆ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಲಿಖಿತದಲ್ಲಿ ದೂರನ್ನು ಸಲ್ಲಿಸತಕ್ಕದ್ದು. ಅಪರಾಧ ರುಜುವಾತಾದ ನಂತರ, ಸಂಬಂಧಪಟ್ಟ ಖಾಸಗಿ ವೈದ್ಯಕೀಯ ಸಂಸ್ಥೆಯು, ಅದು ವಿಧಿಸಿದ ಹೆಚ್ಚಿನ ಶುಲ್ಕದ ಮೊತ್ತದ ಮೂರರಷ್ಟು ಮೊತ್ತಕ್ಕೆ ವಿಸ್ತರಿಸಬಹುದಾದ ಮೊತ್ತ ಅಥವಾ ಒಂದು ಲಕ್ಷ ರೂಪಾಯಿಗಳ ಮೊತ್ತ ಇವುಗಳಲ್ಲಿ ಯಾವುದು ಹೆಚ್ಚೋ ಆ ಮೊತ್ತದಷ್ಟು ದಂಡಕ್ಕೆ ಹೊಣೆಯಾಗತಕ್ಕದ್ದು.

(3) ಹೆಚ್ಚಿನ ಶುಲ್ಕ ವಿಧಿಸುವುದನ್ನು ಹೊರತುಪಡಿಸಿ, ರೋಗಿಯ ಚಾರ್ಟರ್ ಅಥವಾ ಖಾಸಗಿ ವೈದ್ಯಕೀಯ ಸಂಸ್ಥೆಯ ಚಾರ್ಟರ್‌ನಲ್ಲಿ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ, ರೋಗಿಯಿಂದ ದೂರನ್ನು ಸ್ವೀಕರಿಸಿದ ಸಂದರ್ಭದಲ್ಲಿ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, 11ನೇ ಪ್ರಕರಣದ ಉಪಬಂಧಗಳನ್ನು ಖಾಸಗಿ ವೈದ್ಯಕೀಯ ಸಂಸ್ಥೆಗಳು ಉಲ್ಲಂಘಿಸಿರುವುದು ಕಂಡುಬಂದಲ್ಲಿ, ಸಂಬಂಧಪಟ್ಟ ಖಾಸಗಿ ವೈದ್ಯಕೀಯ ಸಂಸ್ಥೆಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವೊಂದನ್ನು ನೀಡಿದ ತರುವಾಯ, ಒಂದು ಕ್ಯಾಲೆಂಡರ್ ವರ್ಷದ ಅವಧಿಯಲ್ಲಿ, ಮೊದಲನೇ

ಸಲ ಪಾಲಿಸದೇ ಇರುವುದಕ್ಕೆ ಹತ್ತು ಸಾವಿರ ರೂಪಾಯಿಗಳ ದಂಡವನ್ನು ಮತ್ತು ಎರಡನೇ ಸಲ ಪಾಲಿಸದೇ ಇರುವುದಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಳ ದಂಡವನ್ನು ವಿಧಿಸತಕ್ಕದ್ದು. ದಂಡದ ಮೊತ್ತದ ಶೇಕಡ ಐವತ್ತರಷ್ಟು ಮೊತ್ತವನ್ನು ರೋಗಿಗೆ ಸಂದಾಯ ಮಾಡತಕ್ಕದ್ದು ಮತ್ತು ಉಳಿದ ಶೇಕಡ ಐವತ್ತರಷ್ಟು ಮೊತ್ತವನ್ನು ಸಾರ್ವಜನಿಕ ಆರೋಗ್ಯ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕಾಗಿ ಜಿಲ್ಲೆಯ ಆರೋಗ್ಯ ರಕ್ಷಾ ಸಮಿತಿಯಲ್ಲಿ ಜಮೆ ಮಾಡತಕ್ಕದ್ದು:

ಪರಂತು, ಒಂದು ಕ್ಯಾಲೆಂಡರ್ ವರ್ಷದಲ್ಲಿ ಮೂರನೇ ಬಾರಿಗೆ ಒಂದು ನಿರ್ದಿಷ್ಟ ಖಾಸಗಿ ವೈದ್ಯಕೀಯ ಸಂಸ್ಥೆಯ ವಿರುದ್ಧದ ಅಂಥ ದೂರಿನ ಸಂದರ್ಭದಲ್ಲಿ, ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳುವುದಕ್ಕಾಗಿ ಮತ್ತು ತರುವಾಯದ ಕಾನೂನು ಕ್ರಮ ಕೈಗೊಳ್ಳಲು ಸಂಬಂಧಪಟ್ಟ ನ್ಯಾಯಾಲಯಕ್ಕೆ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಲಿಖಿತ ದೂರನ್ನು ಸಲ್ಲಿಸತಕ್ಕದ್ದು. ಅಪರಾಧ ರುಜುವಾತಾದ ನಂತರ, ಸಂಬಂಧಪಟ್ಟ ಖಾಸಗಿ ವೈದ್ಯಕೀಯ ಸಂಸ್ಥೆಯು ಐವತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ದಂಡಕ್ಕೆ ಹೊಣೆಯಾಗತಕ್ಕದ್ದು.][1]

[2][(5)][2] [3][ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ][3]ವು, ದೂರಿನ ಆಧಾರದ ಮೇಲೆ ಅಥವಾ ಅನ್ಯಥಾ, ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳ ಅಥವಾ ನೋಂದಣಿಯ ಷರತ್ತುಗಳ ಉಲ್ಲಂಘನೆಯಾಗಿದೆಯೆಂದು ಮೇಲ್ನೋಟಕ್ಕೆ ಕಂಡುಬಂದರೆ, ಲಿಖಿತದಲ್ಲಿ ಆದೇಶವನ್ನು ನೀಡುವ ಮೂಲಕ ಮತ್ತು ಅದರಲ್ಲಿ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸುವ ಮೂಲಕ ಖಾಸಗಿ ವೈದ್ಯಕೀಯ ಸಂಸ್ಥೆಯ ನೋಂದಣಿಯನ್ನು ಅಮಾನತುಗೊಳಿಸಬಹುದು ಅಥವಾ ರದ್ದುಗೊಳಿಸಬಹುದು:

ಪರಂತು, ಅಂಥ ಆದೇಶವನ್ನು ಖಾಸಗಿ ವೈದ್ಯಕೀಯ ಸಂಸ್ಥೆಯು ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು [1][ಮತ್ತು ಒಳರೋಗಿಗಳಿಗೆ ತಡೆರಹಿತವಾದ ಆರೋಗ್ಯ ರಕ್ಷಣೆಯನ್ನು ಯುಕ್ತ ಸಮಯದೊಳಗೆ ಮಾಡಲು ವ್ಯವಸ್ಥೆಗಳನ್ನು ಮಾಡಲಾಗಿದೆಯೆಂದು ಖಚಿತಪಡಿಸಿಕೊಂಡ ಹೊರತು][1] ಹೊರಡಿಸತಕ್ಕದ್ದಲ್ಲ.

[2][(6)][2] (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವು ಖಾಸಗಿ ವೈದ್ಯಕೀಯ ಸಂಸ್ಥೆಯ ಒಳರೋಗಿಗಳನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಿದ ಇನ್ನೊಂದು ಖಾಸಗಿ ವೈದ್ಯಕೀಯ ಸಂಸ್ಥೆಗೆ ವರ್ಗಾಯಿಸಬೇಕೆಂಬ ನಿರ್ದೇಶನವನ್ನು ಒಳಗೊಂಡಿರತಕ್ಕದ್ದು ಮತ್ತು ಅಂಥ ವರ್ಗಾವಣೆ ಮಾಡುವವರೆಗೂ ಅಂಥ ಒಳರೋಗಿಗಳ ಆರೋಗ್ಯಪಾಲನೆ ಹಾಗೂ ಅಭಿರಕ್ಷಣೆ ಕುರಿತ ಉಪಬಂಧಗಳನ್ನು ಸಹ ಒಳಗೊಂಡಿರತಕ್ಕದ್ದು.

[2][(7)][2] (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವು,

(ಎ) 17ನೇ ಪ್ರಕರಣದ ಅಡಿಯಲ್ಲಿ ಅಂಥ ಆದೇಶದ ವಿರುದ್ಧ ಯಾವ ಅಪೀಲನ್ನೂ ಸಲ್ಲಿಸದಿದ್ದಾಗ, ಅಂಥ ಅಪೀಲು ಸಲ್ಲಿಸಲು ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ಕೂಡಲೆ; ಮತ್ತು

(ಬಿ) ಅಂಥ ಅಪೀಲನ್ನು ಸಲ್ಲಿಸಿದ್ದು ಅದು ವಜಾ ಆಗಿರುವಾಗ ಹಾಗೆ ವಜಾ ಮಾಡಿದ ಆದೇಶದ ದಿನಾಂಕದಿಂದ,

– ಪರಿಣಾಮಕಾರಿಯಾಗತಕ್ಕದ್ದು.

(1) 2018ರ ತಿದ್ದುಪಡಿ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) 2018ರ ತಿದ್ದುಪಡಿ ಸಂಖ್ಯೆ 01ರ ಮೂಲಕ ದಿನಾಂಕ 04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ. [illegible]

(3) 2018ರ ತಿದ್ದುಪಡಿ ಸಂಖ್ಯೆ 01ರ ಮೂಲಕ ದಿನಾಂಕ: 04.04.2019ರಿಂದ ಜಾರಿಗೆ ಬರುವಂತೆ [illegible]

ಅನುಬಂಧ - 3

ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಒಳಪಟ್ಟ ಜಿಲ್ಲಾ ಹಾಗೂ ಪ್ರಧಾನ ಆಸ್ಪತ್ರೆಗಳ ವಿವರ

| ಕ್ರಮ ಸಂಖ್ಯೆ | ಜಿಲ್ಲಾ ಮತ್ತು ಪ್ರಧಾನ ಆಸ್ಪತ್ರೆಗಳು |
|---|---|
| 1. | ಜಿಲ್ಲಾ ಆಸ್ಪತ್ರೆ, ರಾಮನಗರ |
| 2. | ಜಿಲ್ಲಾ ಆಸ್ಪತ್ರೆ, ಚಿಕ್ಕಬಳ್ಳಾಪುರ |
| 3 | ಜಿಲ್ಲಾ ಆಸ್ಪತ್ರೆ, ಕೋಲಾರ |
| 4 | ಜಿಲ್ಲಾ ಆಸ್ಪತ್ರೆ, ತುಮಕೂರು |
| 5 | ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ |
| 6 | ಜಿಲ್ಲಾ ಆಸ್ಪತ್ರೆ, ದಾವಣಗೆರೆ |
| 7 | ಜಿಲ್ಲಾಆಸ್ಪತ್ರೆ, ಹಾವೇರಿ |
| 8 | ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು |
| 9 | ಜಿಲ್ಲಾ ಆಸ್ಪತ್ರೆ, ಉಡುಪಿ |
| 10 | ವೆನ್ ಲಾಕ್ ಆಸ್ಪತ್ರೆ, ಮಂಗಳೂರು |
| 11 | ಜಿಲ್ಲಾ ಆಸ್ಪತ್ರೆ, ಬಾಗಲಕೋಟೆ |
| 12 | ಜಿಲ್ಲಾ ಆಸ್ಪತ್ರೆ, ಧಾರವಾಡ |
| 13 | ಜಿಲ್ಲಾ ಆಸ್ಪತ್ರೆ, ಬಿಜಾಪುರ |
| 14 | ಜಿಲ್ಲಾ ಆಸ್ಪತ್ರೆ, ಯಾದಗಿರಿ |
| 15 | ಜಿಲ್ಲಾ ಆಸ್ಪತ್ರೆ, ಬಳ್ಳಾರಿ |
| 16. | ಕೆ.ಸಿ.ಜನರಲ್ ಆಸ್ಪತ್ರೆ, ಬೆಂಗಳೂರು |
| 17 | ಸಾರ್ವಜನಿಕಆಸ್ಪತ್ರೆ, ಜಯನಗರ |
| 18 | ಸಾರ್ವಜನಿಕಆಸ್ಪತ್ರೆ,ಇಂದಿರಾನಗರ |
| 19 | ಜಿಲ್ಲಾ ಆಸ್ಪತ್ರೆ, . ಮೈಸೂರು |

ಸಹ ನಿರ್ದೇಶಕರು(ವೈದ್ಯಕೀಯ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು.

ಅನುಬಂಧ - 04

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಸರ್ಕಾರಿ ಆಸ್ಪತ್ರೆಗಳಲ್ಲಿ ವಾರ್ಡ್ ಚಾರ್ಜ್ ಹಾಗೂ ಮತ್ತಿತರ ಚಾರ್ಜುಗಳ ದರಗಳನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ : ೧) ಸರ್ಕಾರಿ ಆದೇಶ ಸಂಖ್ಯೆ : ಆಕು.ಕ. ೧೨೯ ಎಫ್‌ಎಂಎಂ ೮೯ ದಿನಾಂಕ : ೧೦-೦೮-೧೯೮೮.

೨) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಪತ್ರ ಸಂಖ್ಯೆ : ಲೆಪವಿ (೨) ಆರೋಗ್ಯ : ೧ : ೨೦೦೩-೦೪.

೩) ಸರ್ಕಾರದ ಆದೇಶ ಸಂಖ್ಯೆ : ಆ.ಕು.ಕ. ೭೨ ಆಯೋಸಂ ೧೧ ದಿನಾಂಕ : ೨೧-೯-೨೦೦೧.

ಪ್ರಸ್ತಾವನೆ :

ಮೇಲೆ ಓದಲಾದ (೧) ರಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ವಿವಿಧ ಪರೀಕ್ಷೆಗಳನ್ನು, ಚಿಕಿತ್ಸೆಗಳನ್ನು ಮತ್ತು ವಾರ್ಡುಗಳನ್ನು ಸಾರ್ವಜನಿಕರು ಉಪಯೋಗಿಸಿಕೊಳ್ಳಲು ದರಗಳನ್ನು ನಿಗದಿಗೊಳಿಸಲಾಗಿತ್ತು.

ಮೇಲೆ ಓದಲಾದ (೨) ರ ಪತ್ರದಲ್ಲಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳುರವರು ಸರ್ಕಾರಿ ಆಸ್ಪತ್ರೆಗಳಲ್ಲಿ ವಿವಿಧ ಪರೀಕ್ಷೆಗಳು, ಚಿಕಿತ್ಸೆಗಳು ಮತ್ತು ವಾರ್ಡು ಚಾರ್ಜಸ್ ಬಾಬ್ತು ಸಾರ್ವಜನಿಕರಿಂದ ವಸೂಲಿ ಮಾಡಬೇಕಾಗಿರುವ ದರಗಳನ್ನು ದಿನಾಂಕ : ೧೦-೮-೧೯೮೮ ರ ಸರ್ಕಾರಿ ಆದೇಶದಲ್ಲಿ ನಿಗದಿಗೊಳಿಸಲಾಗಿತ್ತು. ತದನಂತರ ಈ ದರಗಳನ್ನು ಪರಿಷ್ಕರಿಸಿರುವುದಿಲ್ಲವೆಂದು ಸಂಪನ್ಮೂಲಗಳ ಕೊರತೆಯಿಂದಾಗಿ ಆರೋಗ್ಯ ರಕ್ಷಣಾ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಆಸ್ಪತ್ರೆ ಮಟ್ಟದ ಸಂಪನ್ಮೂಲಗಳನ್ನು ಹೆಚ್ಚಿಸಿ ಕ್ರೋಢೀಕರಿಸಿಕೊಳ್ಳಬೇಕಾಗಿರುವುದರಿಂದ ಈ ದರಗಳನ್ನು ಪರಿಷ್ಕರಿಸುವುದು ಅತ್ಯಗತ್ಯವಾಗಿದೆ ಎಂದು ವರದಿ ಮಾಡಿದ್ದಾರೆ.

ವಿವಿಧ ಸೇವೆಗಳಿಗೆ ಆಸ್ಪತ್ರೆಗಳಲ್ಲಿ ವಿಧಿಸಲಾಗುತ್ತಿರುವ ಶುಲ್ಕದ ವರಮಾನವನ್ನು ಆಸ್ಪತ್ರೆಗಳಲ್ಲಿಯೇ ಉಳಿಸಿಕೊಂಡು ಸ್ಥಳೀಯ ನಿರ್ವಹಣೆಗೆ ಬಳಸಬಹುದಾಗಿದೆ. ಹಾಗೂ ಆಸ್ಪತ್ರೆಗಳ ನಿರ್ವಹಣೆಗೆ ಅನುದಾನ ಒದಗಿಸುವುದನ್ನು ಸರ್ಕಾರ ಪರಿಶೀಲಿಸಬಹುದಾಗಿದೆ.

ಮೇಲೆ ಓದಲಾದ (೩) ರ ಆದೇಶದಲ್ಲಿ ಈ ದರಗಳನ್ನು ಪರಿಷ್ಕರಿಸುವ ಕುರಿತು ಅಧಿಕಾರಿಯುತ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಶಿಫಾರಸ್ಸಿನನ್ವಯ ದರಗಳನ್ನು ಪರಿಷ್ಕರಿಸಲು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಆಕುಕ. ೭೨ ಆಯೋಸಂ ೦೧, ಬೆಂಗಳೂರು, ದಿನಾಂಕ : ೦೩-೦೯-೨೦೦೩

ದಿನಾಂಕ : ೧೦-೮-೧೯೮೮ ಸಂಖ್ಯೆ : ಆಕುಕ ೧೨೯ ಎಫ್‌ಎಂಎಂ ೮೯ ರ ಸರ್ಕಾರಿ ಆದೇಶವನ್ನು ಮಾರ್ಪಡಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ ವಿಧಿಸಿ ಸಂಗ್ರಹಿಸಲಾಗುತ್ತಿರುವ ವಾರ್ಡ್ ಚಾರ್ಜುಗಳ ಹಾಗೂ ಇನ್ನಿತರೆ ಚಾರ್ಜುಗಳ ಶುಲ್ಕದ ದರಗಳನ್ನು ಕೂಡಲೇ ಜಾರಿಗೆ ಬರುವಂತೆ ಪರಿಷ್ಕರಿಸಲಾಗಿದೆ. ಪರಿಷ್ಕರಿಸಿದ ದರಗಳ ವಿವರಗಳನ್ನು ಅನುಬಂಧ ೧ ರಿಂದ ೧೨ ರಲ್ಲಿ ಸೂಚಿಸಲಾಗಿದೆ.

ಈ ಆದೇಶವನ್ನು ದಿನಾಂಕ : ೨೨-೦೨-೨೦೦೩ ಸಂಖ್ಯೆ : ಎಫ್‌ಡಿ. ೧೧೭ ವೆಚ್ಚ ೫ ೨೦೦೩ರ ಅನಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿ. ಎಸ್. ಜಗದೀಶಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ ೨೦೦೦ ಪ್ರತಿಗಳನ್ನು ಒದಗಿಸಲು ಕೋರಿದೆ.

೧) ಮಹಾಲೇಖಾಪಾಲರು (ಲೆಕ್ಕ ಪತ್ರ, ತನಿಖೆ), ಕರ್ನಾಟಕ, ಬೆಂಗಳೂರು.
೨) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
೩) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
೪) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು.
೫) ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
೬) ಎಲ್ಲಾ ಜಿಲ್ಲಾಧಿಕಾರಿಗಳಿಗೆ,
೭) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
೮) ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು
೯) ಎಲ್ಲಾ ಜಿಲ್ಲಾ ಸರ್ಜನರು, ಜಿಲ್ಲಾ ಆಸ್ಪತ್ರೆ.
೧೦) ಎಲ್ಲಾ ತಾಲ್ಲೂಕು ಆರೋಗ್ಯ ಅಧಿಕಾರಿಗಳು

} ನಿರ್ದೇಶಕರು ಆ.ಕು.ಕ. ಸೇವೆಗಳು ಇವರ ಮುಖಾಂತರ

೧೧) ಆರ್ಥಿಕ ಇಲಾಖೆ, ವೆಚ್ಚ-೫, ಯೋಜನಾ ಇಲಾಖೆ
೧೨) ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು

ಪ್ರತಿಗಳು :

೧) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
೨) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
೩) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
೪) ಸರ್ಕಾರದ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆಯ ಆಪ್ತ ಸಹಾಯಕರು, ಬೆಂಗಳೂರು.
೫) ಆಂತರಿಕ ಆರ್ಥಿಕ ಸಲಹೆಗಾರರು / ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.